ಪಟಕ್ಕೆ ನಮಿಸಿದ. 'ನಿನ್ನ ಜಾತಿ ಹುಡ್ಗಿನಾ ಪ್ರೀತಿಸ್ದೆ ಅಂತ ಕೋಪ ಇಲ್ಲ ತಾನೆ? ಮೊಸ ಮಾಡಲ್ಲ ತಾನೆ? ನಿನಗಂತೂ ಎಲ್ಲರೂ ಒಂದೇ ಅಲ್ವಾ ತಂದೆ, ಮೋಸ ಮಾಡಲ್ಲ ತಾನೆ' ಎಂದು ಊದುಬತ್ತಿ ಹಚ್ಚಿಟ್ಟ. ಲಕ್ಷ್ಮಿ ಟಿಫಿನ್ ರೂಮಿನತ್ತ ಸಾಗಿ ಒಂದು ಡೋಸ್ ಕಾಫಿ ಕುಡಿದು ಬಂದ.

ಮಧ್ಯಾಹ್ನ ಪೋಸ್ಟ್‌ಮ್ಯಾನ್ ಬಂದು 'ಪೋಸ್ಟ್' ಎಂದು ಕಲ್ಯಾಣಿರಾಗ ಎಳೆದು ಕವರ್ ಬಿಸಾಕಿ ಹೋದ. ದೊಡ್ಡ ಕವರ್ ದೊಪ್ಪನೆ ಬಿತ್ತು. ಹುಡುಗ ಎತ್ತಿ ನೋಡಿದ. ಕವರಿನ ಮೇಲೆ ಪರಿಚಿತ ಹ್ಯಾಂಡ್‌ರೈಟಿಂಗ್—ಅರೆ! ತನ್ನ ಹುಡುಗೀದು! ತೆರೆದು ನೋಡಿದ. ಲಗ್ನಪತ್ರಿಕೆ ಫಳಫಳ ಹೊಳೆಯುತ್ತಿದೆ. ಅವಳ ಹೆಸರಿನ ಪಕ್ಕದಲ್ಲಿ ಬೇರೆಯವನ ಹೆಸರು! ನಂಬದೆ ಪಿಳಿಪಿಳಿಸಿದ. ಸ್ಥಳ ಆದವಾನಿ. ಸಮಯ ಮಧ್ಯಾಹ್ನ 11ಕ್ಕೆ ಮುಹೂರ್ತ. ದಿನಾಂಕವೂ ಇಂದಿನದೆ! ಜಲಜಲ ಬೆವರುತ್ತಾ ವಾಚ್ ನೋಡಿದ. ಆಗಲೇ ಎರಡು ಗಂಟೆಯಾಗಿದೆ. 'ನೊ ನೋ... ಮೋಸ... ಮೋಸ' ಎನ್ನುತ್ತಾ ಅಳುತ್ತಾ ಬಿದಿಗೆ ಬಂದು ಕೂಗಾಡಿದ. ಬೀದಿಯಲ್ಲಿ ಹೋಗುವವರು ನೋಡಿ ಮರುಕಪಟ್ಟರು. ನೆರೆಹೊರೆಯ ಪರಿಚಿತರು ಸಮಾಧಾನ ಮಾಡಲು ಪ್ರಯತ್ನಿಸಿದರು. ಹುಡುಗ ಮಾತ್ರ ಅಳುತ್ತಿದ್ದಾನೋ ನಗುತ್ತಿದ್ದಾನೋ ತಿಳಿಯದಂತಾಡಿದ. ಅದರಲ್ಲಿ ತೋಡಿರಾಗದ ಛಾಯೆ ಕೇಳಿತು.

ನಾನು ಮೋಹನ। ನೀನು ಕಲ್ಯಾಣಿ।
ನಾನು ಶಂಕರಾಭರಣ। ನೀನು ಆನಂದ ಭೈರವಿ।
ನಾನು ಹಂಸಧ್ವನಿ। ನೀನು ವಸಂತ॥
ಪೂಜ್ಯಾಯ ಧನಂಜಯಾಯ ಸಂಗೀತ ರತಾಯಚ।
ಭಜತಾಂ ವೈಣಿಕ ವಿದ್ವಾನ್ ನಮತಾಂ ಕಾಮಧೇನುವೆ॥

ಎಂದೆಲ್ಲಾ ಕೂಗಾಡುತ್ತಾ ಯಾರ ಕೈಗೂ ಸಿಗದೆ ಓಡಿದ... ಓಡಿದ... ಓಡಿ ಹೋದ. ವರ್ಷಗಳ ಹಿಂದಿನ ಪಡಿಪಾಟಲು ಇದೆಲ್ಲ. ಎಲ್ಲರೂ ಅವನನ್ನ ಮರೆತಿದ್ದಾರೆ. ಆದರೆ, ಮ್ಯೂಸಿಕ್ ಸೆಂಟರ್ ಬಾಗಿಲು ತೆರೆದು ಇಂದು ಬಂದಾನೇನೋ ಎಂದು ಅಜ್ಜ ಮಾತ್ರ ಕಾಯುತ್ತಾ ನಿಧಾನವಾಗಿ ವೀಣೆ ನುಡಿಸುತ್ತಾ ಕೂತಿರುತ್ತದೆ. ಹುಡುಗಿಯರೀಗ ಅದರ ಎದುರಿಗೇ ಶಂಕರಶಾಸ್ತ್ರಿ ಹೊಸದಾಗಿ ತೆರೆದ 'ತ್ಯಾಗರಾಜ ಸಂಗೀತ ಶಾಲೆ'ಯ ಹಾದಿ ಹಿಡಿದಿದ್ದಾರೆ. ಅಜ್ಜ ಮಾತ್ರ ದಿನವೂ ಬಾಗಿಲು ತೆಗೆದು ಶಬರಿಯಂತೆ ಕಾದಿದೆ. ನಿಮಗೇನಾದರೂ ಅಕಸ್ಮಾತ್ ಎಲ್ಲಾದರೂ ಕಂಪನೆ ನೀಳಕಾಯದ ಶುದ್ಧಸ್ವರದಲ್ಲಿ ರಾಗಗಳನ್ನು ಗೊಣಗುವ ಹುಡುಗನೇನಾದರೂ ಕಂಡರೆ ತಿಳಿಸಿ ಪ್ಲೀಸ್. ಅವರಜ್ಜನಿಗೆ ತಿಳಿಸಬೇಕಾಗಿದೆ.


## ಬಿ.ಎಲ್. ವೇಣು

ನಾಲ್ಕು ದಶಕಗಳಿಂದ ಕತೆ, ಕಾದಂಬರಿ, ಸಿನಿಮಾ—ಧಾರಾವಾಹಿಗಳ ಕತೆ, ಸಂಭಾಷಣೆಗಳ ಬರವಣಿಗೆಯಲ್ಲಿ ತೊಡಗಿಸಿಕೊಂಡಿರುವ ಲೇಖಕ ಬಿ.ಎಲ್. ವೇಣು. ಏಳು ಐತಿಹಾಸಿಕ ಕಾದಂಬರಿಗಳು ಸೇರಿದಂತೆ 29 ಕಾದಂಬರಿಗಳನ್ನು ಬರೆದಿದ್ದಾರೆ. ಅವರ ಐತಿಹಾಸಿಕ ಕಾದಂಬರಿ 'ಗಂಡುಗಲಿ ಮದಕರಿನಾಯಕ' ಅಪಾರ ಜನಮನ್ನಣೆ ಗಳಿಸಿದೆ. 'ಲೋಕದಲ್ಲಿ ಜನಿಸಿದಾ ಬಳಿಕ...' ಅವರ ಆತ್ಮಕತೆ. ಅವರ ಸುಮಾರು 66 ಕೃತಿಗಳು ಪ್ರಕಟಗೊಂಡಿದ್ದು, 15 ಕೃತಿಗಳು ಸಿನಿಮಾ ಆಗಿವೆ. 66 ಸಿನಿಮಾಗಳಿಗೆ ಸಂಭಾಷಣೆ ಬರೆದಿದ್ದಾರೆ. ಆರೋಗ್ಯ ಇಲಾಖೆಯಲ್ಲಿ ಕಚೇರಿ ಅಧೀಕ್ಷಕರಾಗಿ ನಿವೃತ್ತರು.